೧.ನಿಗಮ ನಿಗಮಾಂತ ವರ್ಣಿತ
ಮನೋಹರ ರೂಪ
ನಾಗರಾಜ ಧರುಡ ಶ್ರೀ ನಾರಾಯಣ
ನಾರಾಯಣ ಶ್ರೀಮನ್ ನಾರಾಯಣ
ನಾರಾಯಣ ಲಕ್ಷ್ಮೀ ನಾರಾಯಣ
ನಾರಾಯಣ ವೇಂಕಟ ನಾರಾಯಣ

ದೀಪಿಂಚು ವೈರಾಗ್ಯ ದಿವ್ಯ ಸೌಖ್ಯಂಬೀಯ
ನೋಪಕ ಕದ ನನ್ನು ನೊಡಬರಪುಚು
ಪೈಪೈನೆ ಸಂಸಾರ ಬಂಧಮುಲ ಕಟ್ಟೇವು
ನಾ ಪಲುಕು ಚೆಲ್ಲ್ಲನ ನಾರಾಯಣ

ವಿವಿಧ ನಿರ್ಬಂಧಮುಲ ವೆಡಲ
ದ್ರ್ರೋಯಕನನ್ನು
ಭವಸಾಗರಮುಲ ದಡಬಡಜೇತುರ
ದಿವಿಜೇಂದ್ರ ವಂದ್ಯ ಶ್ರೀ
ತಿರುವೇಂಕಟಾದ್ರೀಶ
ನವನೀತ ಚೋರ ಶ್ರೀನಾರಾಯಣ
೧. ಗಸ ಮಗ ದಮ ನಿದ ಸನಿ
೨. ಸಗ ಮಗ ಸನಿ ದಮ ಗಸ
೩. ಸನಿದಮ ಗಮದನಿಸ
೪. ಸಗ ಸನಿದಮ ಗಮದನಿ
೫. ಸನಿ ಸನಿ ದಮ ದನಿಸ
೬. ಗಮದನಿ ಸನಿದಮ ದನಿ
೭. ಸಗಮಗ ಸನಿದಮ ದನಿ
೮. ಸಗಮಗ ಸನಿದಮ ದನಿ
ನಾರಾಯಣ ಶ್ರೀಮನ್ ನಾರಾಯಣ
ನಾರಾಯಣ ಲಕ್ಷ್ಮೀ ನಾರಾಯಣಹೆಚ್.ಸ್
ವೇಂಕಟೇಶ್ ಮೂರ್ತಿ.

ನಾರಾಯಣ ವೇಂಕಟ ನಾರಾಯಣ
ನಾರಾಯಣ ಆದಿ ನಾರಾಯಣ
ನಾರಾಯಣ ತಿರುಮಲ ನಾರಾಯಣ

2.ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ ||ಪ||

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕ ನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು ||

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು||೧||

ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು||

ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು ಕೃಪೆಯನಿಟ್ಟು||೨||

**- ಹೆಚ್.ಸ್ ವೇಂಕಟೇಶ್ ಮೂರ್ತಿ.**

೩. ಕೋಡಗನ ಕೋಳಿ ನುಂಗಿತ್ತ
ರಚನೆ – ಜನಪದ ಗೀತೆ
ರಾಗ – ಸಾರಂಗ ತಾಳ – ಕೆಹರವ

**ಕೋಡಗನ ಕೋಳಿ ನುಂಗಿತ್ತಾ|**
**ನೋಡವ್ವ ತಂಗಿ ಕೋಡಗನ ಕೋಳಿ**

ನುಂಗಿತ್ತಾ||ಪಲ್ಲ||

ಆಡು ಆನೆಯ ನುಂಗಿ
ಗೋಡೆ ಸುಣ್ಣವ ನುಂಗಿ
ಆಡಲು ಬಂದ ಪಾತರದವಳ ಮದ್ದಲಿ
ನುಂಗಿತ್ತಾ||೧||
ಕೋಡಗನ ಕೋಳಿ ನುಂಗಿತ್ತಾ||

ಒಳ್ಳು ಒನಕಿಯ ನುಂಗಿ
ಕಲ್ಲು ಗೂಟವ ನುಂಗಿ (ಬೀಸುವ)

ಮೆಲ್ಲಲು ಬಂದ ಮುದುಕಿಯ ನೆಲ್ಲು
ನುಂಗಿತ್ತಾ ||೨||(ಕುಟ್ಟಲಿಕೆ ಬಂದ
ಮುದುಕಿಯ ನೊಣವು)

ಕೋಡಗನ ಕೋಳಿ ನುಂಗಿತ್ತಾ||

ಹಗ್ಗ ಮಗ್ಗವ ನುಂಗಿ
ಮಗ್ಗವ ಲಾಳಿ ನುಂಗಿ
ಮಗ್ಗದಲಿರುವ ಅಣ್ಣನನ್ನ ಮಣಿಯು
ನುಂಗಿತ್ತಾ||೩||
ಕೋಡಗನ ಕೋಳಿ ನುಂಗಿತ್ತಾ||

ಎತ್ತು ಜತ್ತಗಿ ನುಂಗಿ
ಬತ್ತ ಬಾನವ ನುಂಗಿ
ಮುಕ್ಕಟ ತಿರುವೊ ಅಣ್ಣನ ಮೇಳಿ
ನುಂಗಿತ್ತಾ||೪||
ಕೋಡಗನ ಕೋಳಿ ನುಂಗಿತ್ತಾ||
ಗುಡ್ಡ ಗಂವ್ವರ ನುಂಗಿ (ಗವಿಯನು)

ಗಂವ್ವರ ಇರಿವೆಯ ನುಂಗಿ
ಗುರುಗೋವಿಂದನ ಪಾದ ನನ್ನನೆ
ನುಂಗಿತ್ತಾ||೫||
(ಗೋವಿಂದಗುರುವಿನ ಪಾದ ನನ್ನನೆ
ನುಂಗಿತ್ತಾ||೫||)
ಕೋಡಗನ ಕೋಳಿ ನುಂಗಿತ್ತಾ||

ಹಾಡು ೪

ತನುಕರಗದವರಲ್ಲಿ

ರಚನೆ – ಅಕ್ಕಮಹಾದೇವಿ

ರಾಗ –ಪುರಿಯಾಧನಶ್ರಿ ತಾಳ – ದೀಪಚಂದಿ

ತನು ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯ ನೀನು
ತನು ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯ ನೀನು

ಮನ ಕರಗದವರಲ್ಲಿ
ಗಂಧಾಕ್ಷತೆಯನೊಲ್ಲೆಯ್ಯಾ ನೀನು
ತನು ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯ ನೀನು

ಅರಿವು ಕಣ್ ತೆರೆಯದವರಲ್ಲಿ ಈ ಈ ಈ ಈ
ಆ ಆ ಆ ಆ ಆ ಆ ಆ ಆ
ಅರಿವು ಕಣ್ ತೆರೆಯದವರಲ್ಲಿ
ಆರತಿಯನೊಲ್ಲೆಯ್ಯ ನೀನು,
ಅರಿವು ಕಣ್ ತೆರೆಯದವರಲ್ಲಿ
ಆರತಿಯನೊಲ್ಲೆಯ್ಯ ನೀನು,
ಭಾವಶುದ್ದ ವಿಲ್ಲದವರಲಿ
ಧೂಪವನೊಲ್ಲೆಯ ನೀನು
ತನು ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯ ನೀನು

ಪರಿಣಾಮಿಗಳಲ್ಲದವರಲಿ
ನೈವೆದ್ಯವನೊಲ್ಲೆಯ್ಯ ನೀನು,
ಪರಿಣಾಮಿಗಳಲ್ಲದವರಲಿ
ನೈವೆದ್ಯವನೊಲ್ಲೆಯ್ಯ ನೀನು
ಹೃದಯಕಮಲವಿಲ್ಲದವರಲಿ ಈ ಈ
ಹೃದಯಕಮಲವಿಲ್ಲದವರಲಿ
ಇರಲೊಲ್ಲೆಯ್ಯ ನೀನು
ಹೃದಯಕಮಲವಿಲ್ಲದವರಲಿ
ಇರಲೊಲ್ಲೆಯ್ಯ ನೀನು

ಎನ್ನಲ್ಲಿ ಏನುಂಟೆಂದು ಕರಸ್ಥಳದಲಿ
ಇಂಬುಗೊಂಡೆ
ಹೇಳ ಚೆನ್ನಮಲ್ಲಿಕಾರ್ಜುನ
ಹೇಳ ಚೆನ್ನಮಲ್ಲಿಕಾರ್ಜುನ

ಹಾಡು – ೫

ಶಿವನೇ ನಾ ನಿನ್ನ ಸೇವಕನಯ್ಯ

ರಚನೆ – ಶ್ರೀದ ವಿಠಲರು

ರಾಗ– ಮಾಲಕೌಂಸ ತಾಳ – ಕೆಹರವ

ಶಿವನೇ ನಾ ನ್ನಸೇವಕನಯ್ಯ

ದುರ್ಮನ ಬಿಡಿಸಯ್ಯ_।

ಭವಮೋಚಕ ಭಗವತ ಶಾಸ್ತ್ರವ

ಅವನೀಶಗೆ ಪೇಳ್ದವ ನೀನಲ್ಲವೆ

ವೈಕಾರಿಕ ತೈಜಸ ತಾಮಸವೆಂಬ

ತ್ರೈತತ್ವಗಳೆಂಬ

ಸಾಕಾರಿ ಶಾರ್ವರಿ ಧವ ಧರ ಸಾಂಬ
ಸುರಪಾದ್ಯರಬಿಂಬ
ವೈಕಲ್ಯಾಸ್ಪದ ವಾಕಳೆದೊಮ್ಮೆಗೆ
ವೈಕುಂಠಕೆ ಕರೆದೊಯ್ ಕರಿಗೊರಳ ॥೧॥

ಮೃತ್ಯುಂಜಯ ಮುಪ್ಪುರ ಹರ ಮಹದೇವ
ದೇವರ್ಕಳ ಕಾವ ಸ್ತುತ್ಯಾದ್ರಿಜ ದಿತಿಜ ಪತಿ
ವನ ಧಾವ
ದುರಿತಾಂಬುಧಿನಾವ
ಕೃತ್ತಿವಾಸ ಎನ್ನೆತ್ಯಪರಾಧಗಳೆತ್ತೆಣಿಸದೆ
ಕೃತ ಕೃತ್ಯನ ಮಾಡೈ ಶಿವನೆ ॥೨॥

ಗಂಗಾಧರ ಷಣ್ಮುಖ ಗಣಪರ ತಾತ
ತ್ರೈಲೋಕ್ಯತ್ರಾತ ಲಿಂಗಾಹ್ವಯ ತಾರಕಹರ
ನಿರ್ಭೀತ, ಭುವನಾಧಿ ನಾಥ
ತುಂಗ ಮಹಿಮ ನಿಸ್ಸಂಗ ಹರಿಯ
ದ್ವಿತಿಯಂಗ ಡಮರು ಶೂಲಂಗಳ ಪಿಡಿದಿಹ
ಶಿವನೇ॥೩॥

ಪಂಚಾನನ ಪನ್ನಗ ಭೂಷಣ ಭೀಮ
ಭುವನಾಭಿ ರಾಮ ಸಂಚಿಂತನ ಮಾಡುವ
ಸಣ್ತುತ ನೇಮ
ಶ್ರೀರಾಮ ನಾಮ
ಪಂಚಶರಾರಿ ವಿರಿಂಚಿ ಕುವರ
ನಿಷ್ಕಿಂಚನ ರೊಡೆಯನ ಮಂಚಪದಾರ್ಹನೆ
ಶಿವನೇ ॥೪॥
ಸ್ಫಟಿಕಾಭ ಕಪಾಲಿ ಕಾಮಿತ ಫಲದ
ಫಲ್ಗುಣ ಸಖ ಶ್ರೀದವಿಠಲಾಶ್ರಯ
ವಿತ್ತಪಮಿತ್ರ ದ್ವಿರದ ಚರ್ಮಾಂಬರನಾದ
ಕುಟಿಲರಹಿತ ಧೂರ್ಜಟಿ ವೃಷಭಧ್ವಜ
ನಿಟಿಲನಯನ ಸಂಕಟವ ನಿವಾರಿಸು ॥೫॥

೬. ರಚನ: ಅನ್ನಮಾಚಾರ್ಯ

ತಂದನಾನ ಅಹಿ, ತಂದನಾನ ಪುರೆ
ತಂದನಾನ ಭಳಾ, ತಂದನಾನ ॥

ಬ್ರಹ್ಮ ಮೊಕಟೇ, ಪರ
ಬ್ರಹ್ಮ ಮೊಕಟೇ, ಪರ
ಬ್ರಹ್ಮ ಮೊಕಟೇ, ಪರ
ಬ್ರಹ್ಮ ಮೊಕಟೇ ॥

ಕಂದುವಗು ಹೀನಾಧಿಕಮು ಲಿಂದು ಲೇವು
ಅಂದರಿಕಿ ಶ್ರೀಹರೇ ಅಂತರಾತ್ಮ ।
ಇಂದುಲೋ ಜಂತುಕುಲ ಮಂತಾ ಒಕಟೇ
ಅಂದರಿಕೀ ಶ್ರೀಹರೇ ಅಂತರಾತ್ಮ ॥

ನಿಂಡಾರ ರಾಜು ನಿದ್ರಿಂಚು
ನಿದ್ರಯುನೊಕಟೇ
ಅಂಡನೇ ಬಂಟು ನಿದ್ರ – ಅದಿಯು
ನೊಕಟೇ ।
ಮೆಂಡೈನ ಬ್ರಾಹ್ಮಣುಡು ಮೆಟ್ಟು
ಭೂಮಿಯೊಕಟೇ
ಚಂಡಾಲುಡುಂಡೇಟಿ ಸರಿಭೂಮಿ
ಯೊಕಟೇ ॥

ಅನುಗು ದೇವತಲಕುನು ಅಲ ಕಾಮ ಸುಖ
ಮೊಕಟೇ
ಘನ ಕೀಟ ಪಶುವುಲಕು ಕಾಮ ಸುಖ
ಮೊಕಟೇ ।
ದಿನ ಮಹೋರಾತ್ರಮುಲು – ತೆಗಿ
ಧನಾಢ್ಯುನ ಕೊಕಟೇ
ವೊನರ ನಿರುಪೇದಕುನು ಒಕ್ಕಟೇ
ಅವಿಯು ॥

ಕೊರಲಿ ಶಿಷ್ಟಾನ್ನಮುಲು ತುನು ನಾಕ
ಲೊಕಟೇ

ತಿರುಗು ದುಷ್ಟಾನ್ನಮುಲು ತಿನು ನಾಕ
ಲೊಕಟೇ ।
ಪರಗ ದುರ್ಗಂಧಮುಲಪ್ಪೈ ವಾಯು
ವೊಕಟೇ
ವರಸ ಪರಿಮಳಮುಪ್ಪೈ ವಾಯು ವೊಕಟೇ
॥

ಕಡಗಿ ಏನುಗು ಮೀದ ಕಾಯು
ಎಂಡೊಕಟೇ
ಪುಡಮಿ ಶುನಕಮು ಮೀದ ಬೊಲಯು
ನೆಂಡೊಕಟೇ ।
ಕಡು ಪುಣ್ಯುಲನು – ಪಾಪ ಕರ್ಮುಲನು
ಸರಿ ಗಾವ
ಜಡಿಯು ಶ್ರೀ ವೇಂಕಟೇಶ್ವರು ನಾಮ
ಮೊಕಟೇ ॥

ವಚನ - 2

ಹಸಿವಾದೊಡೆ ಭಿಕ್ಷಾನ್ನಗಳುಂಟು

ತೃಷೆಯಾದರೆ ಕೆರೆ ಹಳ್ಳ ಭಾವಿಗಳುಂಟು

ಶಯನಕ್ಕೆ ಹಾಳು ದೇಗುಲಗಳುಂಟು

ಚೆನ್ನಮಲ್ಲಿಕಾರ್ಜುನಯ್ಯ ಆತ್ಮ ಸಂಗಾತಕ್ಕೆ

ನೀನೆನಗುಂಟು… – ಅಕ್ಕ ಮಹಾದೇವಿ

ವಚನ - 3

ವಚನದಲ್ಲಿ ನಾಮಾಮೃತ ತುಂಬಿ

ನಯನದಲ್ಲಿ ಮೂರುತಿ ತುಂಬಿ

ಮನದಲ್ಲಿ ನಿಮ್ಮ ನೆನಹು ತುಂಬಿ

ಕಿವಿಯಲ್ಲಿ ಕೀರುತಿ ತುಂಬಿ.

ಕೂಡಲಸಂಗಮದೇವಾ ನಿಮ್ಮ

ಚರಣಕಮಲದೊಳಗಾನು ತುಂಬಿ.

ವಚನ - 4

ಜ್ಞಾನದ ಬಲದಿಂದ ಅಜ್ಞಾನದ ಕೇಡು

ನೋಡಯ್ಯಾ

ಜ್ಯೋತಿಯ ಬಲದಿಂದ ತಮಂಧದ ಕೇಡು

ನೋಡಯ್ಯಾ

ಸತ್ಯದ ಬಲದಿಂದ ಅಸತ್ಯದ ಕೇಡು

ನೋಡಯ್ಯಾ

ಪರುಷದ ಬಲದಿಂದ ಅವಲೋಹದ ಕೇಡು

ನೋಡಯ್ಯಾ

ಕೂಡಲಸಂಗನ ಶರಣರ ಅನುಭಾವದ

ಬಲದಿಂದ ಎನ್ನ ಭವದ ಕೇಡು ನೋಡಯ್ಯಾ.

ವಚನ - 5

ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಗಳಿಗಂಜಿದಡೆಂತಯ್ಯಾ ? ಸಮುದ್ರದ

ತಡಿಯಲೊಂದು ಮನೆಯ ಮಾಡಿ

ನೊರೆತೆರೆಗಳಿಗಂಜಿದಡೆಂತಯ್ಯಾ ?

ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕ್ಕೆ ನಾಚಿದಡೆಂತಯ್ಯಾ ?

ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ

ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ

ತಾಳದೆ ಸಮಾಧಾನಿಯಾಗಿರಬೇಕು.

ವಚನ - 5

ಉಳ್ಳವರು ಶಿವಾಲಯವ ಮಾಡುವರು !

ನಾನೇನ ಮಾಡುವೆ ? ಬಡವನಯ್ಯ!

ಎನ್ನ ಕಾಲೇ ಕಂಬ, ದೇಹವೇ ದೇಗುಲ,

ಶಿರವೇ ಹೊನ್ನ ಕಳಶವಯ್ಯ!

ಕೂಡಲಸಂಗಮದೇವ ಕೇಳಯ್ಯ,

ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!

೭.ವಂದಿಸುವುದಾದಿಯಲಿ ಗಣನಾಥನ || ಪ ||

ಸಂದೇಹಸಲ್ಲ ಶ್ರೀಹರಿಯಾಜ್ಞೆಯಿದಕುಂಟು || ಅ.ಪ ||

ಹಿಂದೆ ರಾವಣ ತಾನು ವಂದಿಸದೆ ಗಜಮುಖನ

ನಿಂದು ತಪವನು ಗೈದು ವರ ಪಡೆಯಲು

ಒಂದು ನಿಮಿಷದಿ ಬಂದು ವಿಘ್ನವನು ಆಚರಿಸಿ

ತಂದ ವರಗಳನೆಲ್ಲ ಧರೆಗೆ ಇಳಿಸಿದನು || ೧ ||

ಅಂದಿನಾ ಬಗೆಯರಿತು ಬಂದು ಹರಿ ಧರ್ಮಜಗೆ

ಮುಂದೆ ಗಣಪನ ಪೂಜಿಸೆಂದು ಪೇಳೆ

ಒಂದೆ ಮನದಲಿ ಬಂದು ಪೂಜಿಸಲು ಗಣನಾಥ

ಹೊಂದಿಸಿದ ನಿರ್ವಿಘ್ನದಿಂದ ರಾಜ್ಯವನು || ೨ ||

ಇಂದು ಜಗವೆಲ್ಲ ಉಮೆನಂದನನ ಪೂಜಿಸಲು

ಚೆಂದದಿಂದಲಿ ಸಕಲ ಸಿದ್ಧಿಗಳನಿತ್ತು

ತಂದೆ ಸಿರಿ ಪುರಂದರವಿಟ್ಠಲನ ಸೇವೆಯೊಳು

ಬಂದ ವಿಘ್ನ ಕಳೆದಾನಂದವನು ಕೊಡುವ || ೩ ||